# ವಚನಕಾರರ ಕಣ್ಣಲ್ಲಿ ಹೆಣ್ಣು

**ಸುಧಾ ಬಿ.ಎಸ್.***

**DOI: https://doi.org/10.5281/zenodo.20614618**

**ABSTRACT**

ಕನ್ನಡ ಸಾಹಿತ್ಯದಲ್ಲಿ ವಚನಗಳಿಗೆ ವಿಶೇಷ ಸ್ಥಾನವಿದೆ. ವಿಶ್ವಸಾಹಿತ್ಯಕ್ಕೆ ಕನ್ನಡ ಸಾಹಿತ್ಯದ ವಿಶಿಷ್ಟ ಕೊಡುಗೆ ವಚನಸಾಹಿತ್ಯ ಎಂಬುದು ಎಲ್ಲರಿಗೂ ತಿಳಿದಿರುವ ವಿಷಯವೇ. ಅದರ ಜೊತೆಗೆ ವಚನಕಾರರ ಹೆಣ್ಣನ್ನು ಕುರಿತ ಆಲೋಚನೆಗಳೂ ಕೂಡ ಜಾಗತಿಕ ಮಟ್ಟದಲ್ಲಿ ಚರ್ಚೆಗೆ ಒಳಗಾಗಬಹುದಾದ ವಿಷಯವೇ ಆಗಿದೆ. ಏಕೆಂದರೆ ವಚನಕಾರರ ಹೆಣ್ಣನ್ನು ಕುರಿತ ಆಲೋಚನೆಗಳು ಮೇಲ್ನೋಟಕ್ಕೆ ಸಾಂಪ್ರದಾಯಿಕ ನೋಟಕ್ರಮದಿಂದ ಕೂಡಿವೆ ಎಂದೆನಿಸಿದರೂ ಅವು ಆಂತರ್ಯದಲ್ಲಿ ಹೆಣ್ಣನ್ನು ಅವಳ ನಿಜದ ನೆಲೆಯಲ್ಲಿ ಗುರುತಿಸಿ, ಅವಳ ಶಕ್ತಿಯನ್ನು ಅನಾವರಣಗೊಳಿಸುತ್ತವೆ. ಈ ನಿಟ್ಟಿನಲ್ಲಿ ವಚನಕಾರರ ವಚನಗಳಲ್ಲಿ ಹೆಣ್ಣನ್ನು ಕುರಿತ ಆಲೋಚನೆಗಳು ಯಾವ ನೆಲೆಯಲ್ಲಿ ವ್ಯಕ್ತವಾಗಿವೆ ಎನ್ನುವುದು ಮತ್ತೆ ಮತ್ತೆ ಚರ್ಚೆಗೆ ಒಳಗಾಗುತ್ತಿರುವ ವಿಷಯವೇ ಆಗಿದೆ. ವಚನಗಳನ್ನು ಹೆಚ್ಚು ಹೆಚ್ಚು ಚರ್ಚೆಗೆ ಒಳಪಡಿಸಿದಂತೆಲ್ಲಾ ವಚನಕಾರರ ನಿಲುವುಗಳು ಮತ್ತಷ್ಟು ಸ್ಪಷ್ಟವಾಗುತ್ತಿವೆ. ಹಾಗಾಗಿ ವಚನಗಳನ್ನು ಸೂಕ್ಷ್ಮ ಓದಿಗೆ ಒಳಪಡಿಸಿ ಹೆಣ್ಣನ್ನು ಕುರಿತ ಅವರ ನಿಲುವುಗಳನ್ನು ತಿಳಿಯುವುದು ಈ ಲೇಖನದ ಉದ್ದೇಶವಾಗಿದೆ.

**KEYWORDS:** ವಚನ ಸಾಹಿತ್ಯ, ಸ್ತ್ರೀ ಸಮಾನತೆ, ಲಿಂಗ ತಾರತಮ್ಯ, ಸತಿ–ಪತಿಭಾವ, ಸ್ವ–ಘನತೆ, ಜಾತಿ ವ್ಯವಸ್ಥೆ.

12ನೇ ಶತಮಾನ ಹಲವು ಮೊದಲುಗಳಿಗೆ ನಾಂದಿ ಹಾಡಿದ ಕಾಲ. ಸ್ವಾತಂತ್ರ್ಯ, ಸಮಾನತೆ, ಸಹೋದರತ್ವಗಳಿಗೆ ಹೊಸ ವ್ಯಾಖ್ಯಾನ ನೀಡಿದವರು ವಚನಕಾರರು. ಇವರು ತಮ್ಮ ವಚನಗಳ ಮೂಲಕ ಅಂತರಂಗ – ಬಹಿರಂಗ, ಸ್ವರ್ಗ – ನರಕ, ಪಾಪ–ಪುಣ್ಯ, ಮುಂತಾದ ಪರಿಕಲ್ಪನೆಗಳನ್ನು ಮುರಿದು ಕಟ್ಟಿದರು. ಆಚಾರವೇ ಸ್ವರ್ಗ – ಅನಾಚಾರವೇ ನರಕ, ಅಯ್ಯಾ ಎಂದರೆ ಸ್ವರ್ಗ – ಎಲವೋ ಎಂದರೆ ನರಕ ಎಂದು ವೈದಿಕ ಪರಂಪರೆಯ ಸ್ವರ್ಗ, ನರಕ, ಮೋಕ್ಷದ ಪರಿಕಲ್ಪನೆಯನ್ನು

* **ಡಾ. ಸುಧಾ ಬಿ.ಎಸ್.,** ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಾಮನಗರ, ಬೆಂಗಳೂರು ದಕ್ಷಿಣ ಜಿಲ್ಲೆ.

ಸಂಪೂರ್ಣವಾಗಿ ನಿರಾಕರಿಸಿ, ಲೌಕಿಕ ಬದುಕಿನಲ್ಲಿಯೇ ಆಧ್ಯಾತ್ಮ ಸಾಧನೆಯ ಔನತ್ಯವನ್ನು ಸಾಧಿಸಿದರು. ಇವರು ತರಬಯಸಿದ ಸಾಂಸ್ಕೃತಿಕ ಮತ್ತು ಸಾಮಾಜಿಕ ಬದಲಾವಣೆಗಳು ಸಮಾನತೆ, ಭ್ರಾತೃತ್ವ ಹಾಗೂ ಸಹೋದರತ್ವದ ತಳಹದಿಯ ಮೇಲೆ ಕಟ್ಟಲ್ಪಟ್ಟವು. ಆ ಕಾರಣದಿಂದಾಗಿಯೇ ವಚನ ಚಳುವಳಿ ಮತ್ತು ವಚನಕಾರರ ಬದುಕು ಬರಹ ಇಂದಿಗೂ, ಎಂದೆಂದಿಗೂ ಪ್ರಸ್ತುತವಾಗುವುದರೊಂದಿಗೆ ಮಾದರಿಯೂ ಕೂಡ ಆಗಿವೆ.

12ನೇ ಶತಮಾನದಲ್ಲಿ ವಚನ ಚಳುವಳಿಯ ಸಹಕಾರದೊಂದಿಗೆ ಹೆಣ್ಣಿನ ಸಾಮಾಜಿಕ, ಧಾರ್ಮಿಕ ಭಾಗವಹಿಸುವಿಕೆ ಹಾಗೂ ಅವಳ ಅಭಿವ್ಯಕ್ತಿಗೆ ಸಂಬಂಧಿಸಿದಂತೆ ಮಹತ್ವದ ಬದಲಾವಣೆಗಳಾದವು. ಹೆಣ್ಣಿನ ವಿಷಯದಲ್ಲಾದ ಈ ಬದಲಾವಣೆ ಅವಳ ಬದುಕಿನಲ್ಲಿ ಸ್ಥಾನಪಲ್ಲಟ ಮತ್ತು ಸ್ಥಿತ್ಯಂತರಗಳು ಏರ್ಪಡಲು ಕಾರಣವಾಯಿತು. ಕುಟುಂಬ ಕೇಂದ್ರಿತವಾಗಿದ್ದ ಹೆಣ್ಣು ಸಮಾಜಕ್ಕೆ ಮುಖಾಮುಖಿಯಾಗುವ ಸನ್ನಿವೇಶ ನಿರ್ಮಾಣವಾಗಿ, ಅವಳ ಅಭಿವ್ಯಕ್ತಿಗೆ ಮುಕ್ತವಾದ ಅವಕಾಶ ದೊರೆಯಿತು. ಹೆಣ್ಣು ಸಾಮಾಜಿಕವಾಗಿ ಆತ್ಮವಿಶ್ವಾಸ ಮತ್ತು ಸ್ವಘನತೆಯಿಂದ ತೊಡಗಿಸಿಕೊಳ್ಳಲು ಸಾಧ್ಯವಾಯಿತು. ಗುಪ್ತಗಾಮಿನಿಯಾಗಿ ಹರಿಯುತ್ತಿದ್ದ ಅವಳ ಅಭಿವ್ಯಕ್ತಿ ಅವಳದೇ ಹೆಸರಿನಿಂದ, ಅವಳ ಇಚ್ಛೆಯ ಅಂಕಿತದಿಂದ ಅಧಿಕೃತತೆಯನ್ನು ಪಡೆದುಕೊಂಡಿತು. ಹಲವು ಕಟ್ಟುಪಾಡುಗಳ ನಡುವೆಯೂ ವಚನಗಳ ಮೂಲಕ ತನ್ನ ಅಂತರಾಳದ ತಳಮಳಗಳಿಗೆ ಜೀವ ತುಂಬುವ ಕೆಲಸ ಯಶಸ್ವಿಯಾಗಿ ನಡೆಯಿತು. ಜನಪದ ಸಾಹಿತ್ಯವನ್ನು ಹೊರತು ಪಡಿಸಿದರೆ ಹೆಣ್ಣು ತನ್ನ ಅಂತರಂಗವನ್ನು ಮುಕ್ತವಾಗಿ ತೆರೆದಿಟ್ಟಿದ್ದು ವಚನಗಳ ಮೂಲಕವೇ.

ವಚನ ಚಳುವಳಿ, ವಚನಕಾರರು ಮತ್ತು ವಚನಕಾರ್ತಿಯರು ಒಂದಕ್ಕೊಂದು ಬಿಡಿಸಲಾರದ ಅವಿನಾಭಾವ ಸಂಬಂಧವನ್ನು ಹೊಂದಿದ್ದರೂ, ವಚನಕಾರ್ತಿಯರು ಉಳಿದೆರಡರ ಪ್ರಭಾವದ ನಡುವೆ ತಮ್ಮ ಸ್ವಂತಿಕೆಯನ್ನು ಕಾಯ್ದುಕೊಂಡು ಭಿನ್ನ ಮತ್ತು ಮುಕ್ತ ಅಭಿವ್ಯಕ್ತಿಯನ್ನು ಮಾಡಿದ್ದಾರೆ. ಏಕೆಂದರೆ ವಚನ ಚಳುವಳಿ 12ನೇ ಶತಮಾನದ ಸಾಮಾಜಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಸ್ಥಿತ್ಯಂತರದ ಅಭಿವ್ಯಕ್ತಿಯಾಗಿದ್ದರೆ, ವಚನಕಾರರು ಈ ಸ್ಥಿತ್ಯಂತರದ ನಡುವಿನ ಕೊಂಡಿಯಾಗಿದ್ದಾರೆ. ಅದೇ ಸಂದರ್ಭದಲ್ಲಿ ವಚನ ಚಳುವಳಿಯ ದ್ವಂದ್ವಾತ್ಮಕ, ವೈರುಧ್ಯಗಳ ಪ್ರತಿನಿಧಿಗಳೂ ಆಗಿದ್ದಾರೆ. ಆದರೆ ವಚನಕಾರ್ತಿಯರು ಸಾಮಾಜಿಕ ಸಮಸ್ಯೆಗಳಿಗೆ ಮದ್ದನ್ನು ಹುಡುಕುವ, ತಮ್ಮ ವ್ಯಕ್ತಿತ್ವಕ್ಕೆ ಅಧಿಕೃತತೆಯನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ವಚನಗಳನ್ನು ರಚಿಸಿದ್ದಾರೆ. ವಚನಕಾರ್ತಿಯರ ಅಭಿವ್ಯಕ್ತಿ ವಚನ ಚಳುವಳಿಯ ಆಶಯ ಮತ್ತು ವಚನಕಾರರ ಅಭಿವ್ಯಕ್ತಿಗಿಂತ ಸೂಕ್ಷ್ಮತೆಯಿಂದ ಕೂಡಿದೆ. ಹೆಣ್ಣನ್ನು ಕುರಿತಂತೆ ವಚನಕಾರರು ಮತ್ತು ವಚನಕಾರ್ತಿಯರ ಬರಹಗಳಲ್ಲಿ ಸ್ಪಷ್ಟವಾಗಿ ಗೆರೆ ಎಳೆದಂತೆ ಭಿನ್ನತೆ ಮತ್ತು ವೈಶಿಷ್ಟ್ಯತೆಯನ್ನು ಗುರುತಿಸಬಹುದಾಗಿದೆ. ಹಾಗಾಗಿ ವಚನ ಚಳುವಳಿಯಲ್ಲಿ ಹೆಣ್ಣಿನ ಪ್ರತಿನಿಧೀಕರಣ ಎನ್ನುವುದು ಹೆಣ್ಣಿನ ಭಾವಾಭಿವ್ಯಕ್ತಿಯ, ಆಂತರ್ಯದ ಶಕ್ತಿಯ ಅನಾವರಣವೇ ಆಗಿದೆ.

ವಚನಕಾರರು ಸಾಮಾಜಿಕ ಸಮಾನತೆಯನ್ನು ಕುರಿತು ಮಾತನಾಡುತ್ತಾರೆ. ಅದರ ಭಾಗವಾಗಿಯೇ ಹೆಣ್ಣಿನ ಸಮಾನತೆಯ ಆಶಯಗಳೂ ಕೂಡ ಅಭಿವ್ಯಕ್ತವಾಗುತ್ತವೆ. ಆದರೆ ವಚನಕಾರ್ತಿಯರು ಹೆಣ್ಣಿನ ಸಮಾನತೆಯನ್ನು 'ಸ್ವಾವಲಂಬನೆ' ಮತ್ತು 'ಸ್ವಘನತೆಯ' ನೆಲೆಗಳಲ್ಲಿ ಗುರುತಿಸುತ್ತಾರೆ. ವಚನಕಾರರು ಹೆಣ್ಣಿಗೆ ನ್ಯಾಯ ಒದಗಿಸಿಕೊಡುವ, ಅವಳ ವ್ಯಕ್ತಿತ್ವಕ್ಕೆ ಅಧಿಕೃತತೆ ತಂದುಕೊಡುವ, ನಿಜದ ನೆಲೆಯಲ್ಲಿ ಅವಳ ವ್ಯಕ್ತಿತ್ವವನ್ನು ಚಿತ್ರಿಸುವ ನಿಟ್ಟಿನಲ್ಲಿ ಪ್ರಯತ್ನ ಮಾಡಿದರೆ, ವಚನಕಾರ್ತಿಯರು ತಮ್ಮ ಶಕ್ತಿ, ಸಾಮರ್ಥ್ಯ, ಆಲೋಚನೆ, ಚಿಂತನೆಗಳನ್ನು ಅನಾವರಣಗೊಳಿಸುವ, ತಮ್ಮ ಸ್ವಾಯತ್ತತೆಯನ್ನು ಸಾಬೀತುಗೊಳಿಸುವ ನಿಟ್ಟಿನಲ್ಲಿ ಮುಂದುವರಿಯುತ್ತಾರೆ. ಅಂದರೆ ವಚನಕಾರರು ತರಬಯಸುತ್ತಿರುವ ಸ್ವಾತಂತ್ರ್ಯ ಸಮಾನತೆಗೂ, ವಚನಕಾರ್ತಿಯರು ಬಯಸುತ್ತಿರುವ ಸ್ವಾತಂತ್ರ್ಯ, ಸಮಾನತೆಗೂ ವ್ಯತ್ಯಾಸವಿದೆ. ಜೊತೆಗೆ ವಚನಕಾರ್ತಿಯರು ಇದನ್ನು ನಿರ್ವಹಿಸುತ್ತಿರುವ ವಿಧಾನ ಮೇಲ್ನೋಟಕ್ಕೆ ಭಕ್ತಿ ಮಾರ್ಗವೆನಿಸಿದರೂ ಅದು ಸ್ವಅಭಿವ್ಯಕ್ತಿ ಮತ್ತು ಸ್ವಂತಿಕೆಯ ಕಂಡುಕೊಳ್ಳುವ ಆಶಯದ್ದೇ ಆಗಿದೆ.

ವಚನಕಾರರು ಹೆಣ್ಣನ್ನು ಗ್ರಹಿಸಿದ ಮತ್ತು ನಿರ್ವಚಿಸಿದ ಬಗೆ ಸಾಂಪ್ರದಾಯಿಕವಾಗಿ ಬಂದ ಹಲವು ನಂಬಿಕೆಗಳನ್ನು ನಿರಾಕರಿಸುವಂತದ್ದು. ಕರ್ನಾಟಕವನ್ನೂ ಒಳಗೊಂಡಂತೆ ಪ್ರಪಂಚದಾದ್ಯಂತ ಮಧ್ಯಕಾಲೀನ ಸಂದರ್ಭದಲ್ಲಿ ಹೆಣ್ಣನ್ನು ಮೋಹ, ಮಾಯೆ, ಬಂಧನ, ಕೇಡು, ನರಕಕ್ಕೆ ದಾರಿ ಎಂದೆಲ್ಲಾ ಭಾವಿಸಲಾಗಿತ್ತು. ಮುಂದುವರೆದು ಎರಡು ವಿರುದ್ಧ ನೆಲೆಗಳಲ್ಲಿ ಹೆಣ್ಣಿನ ಇರುವಿಕೆಯನ್ನು ಗುರುತಿಸುತ್ತಿದ್ದರು. ಒಂದು ದೇವಿ ಸ್ವರೂಪವಾದರೆ, ಮತ್ತೊಂದು ರಾಕ್ಷಸಿಯ ಸ್ವರೂಪ. ಈ ಎರಡೂ ನೆಲೆಗಳೂ ಹೆಣ್ಣನ್ನು ಅವಳ ಇರುವಿಕೆಯಿಂದ ಬೇರ್ಪಡಿಸಿ, ಅವಳದಲ್ಲದ ವ್ಯಕ್ತಿತ್ವವನ್ನು ಅವಳ ಮೇಲೆ ಹೇರುತ್ತಿದ್ದವು. ಇದು ಕಾಲ, ದೇಶ, ಧರ್ಮಾತೀತವಾಗಿ ಹೆಣ್ಣನ್ನು ನಿರ್ವಚಿಸಿದ ಬಗೆ. ಇದಕ್ಕೆ ಹಿನ್ನೆಲೆಯಾಗಿದ್ದದ್ದು ವೈದಿಕ ಪರಂಪರೆಯ ಸ್ವರ್ಗ, ನರಕ, ಪಾಪ, ಪುಣ್ಯಗಳ ಪರಿಕಲ್ಪನೆ. ವಚನಕಾರರು ವೈದಿಕ ಶಾಹಿಯ ಹಿಂಸ್ರಕ ರೂಪಗಳಾದ ಜಾತಿವ್ಯವಸ್ಥೆ, ಲಿಂಗತಾರತಮ್ಯಗಳನ್ನು ಪ್ರಬಲವಾಗಿ ವಿರೋಧಿಸುತ್ತಾರೆ. ಇದರ ಜೊತೆ ಜೊತೆಗೆ ವಚನಕಾರರು ಹೆಣ್ಣನ್ನು ಎಲ್ಲಾ ಕೆಡುಕಿನ ರೂಪಕಗಳಿಂದ ಬಿಡುಗಡೆಗೊಳಿಸಿ ಅವಳನ್ನು ನಿಜದ ನೆಲೆಯಲ್ಲಿ ಚಿತ್ರಿಸುವ ಪ್ರಯತ್ನ ಮಾಡುತ್ತಾರೆ. ಇದುವರೆವಿಗೂ ಹೆಣ್ಣಿನ ಬಗೆಗೆ ಇದ್ದ ಮಿಥ್ಯಾ ಕಲ್ಪನೆಗಳನ್ನೂ, ನಾಗರೀಕತೆಯ ವಿಕಾಸದ ಹಂತದಲ್ಲಿ ಹೆಣ್ಣಿನ ಮೇಲೆ ಹೇರಲ್ಪಟ್ಟ ಒತ್ತಾಯಪೂರ್ವಕ ಗುಣಾವಗುಣಗಳನ್ನು ಮೊದಲ ಬಾರಿಗೆ ವಚನಕಾರರು ನಿರಾಕರಿಸುವ ಪ್ರಯತ್ನ ಮಾಡುತ್ತಾರೆ.

ವಚನಗಳಲ್ಲಿ ಹೆಣ್ಣು ವಿಭಿನ್ನ ಮಾದರಿಗಳಲ್ಲಿ ಅಭಿವ್ಯಕ್ತಿಗೊಳ್ಳುತ್ತಾಳೆ. ಏಕೆಂದರೆ ಬಸವಣ್ಣನನ್ನೂ ಒಳಗೊಂಡಂತೆ ಹಲವು ವಚನಕಾರರಿಗೆ ಹೆಣ್ಣನ್ನು ಕುರಿತಾದ ಸಾಂಪ್ರದಾಯಿಕ ಮನಸ್ಥಿತಿಯಿಂದ ಸಂಪೂರ್ಣವಾಗಿ ಹೊರಬರಲು ಸಾಧ್ಯವಾಗಿರಲಿಲ್ಲ. ಹೆಣ್ಣಿನ ಸ್ವಾತಂತ್ರ್ಯ, ಸಮಾನತೆ, ಬಿಡುಗಡೆಯ ಹಂಬಲ ತೀವ್ರವಾಗಿ ಕಾಡುತ್ತಿರುವಾಗಲೂ,

ಹೆಣ್ಣಿನ ಜೈವಿಕತೆಯ ಬಗೆಗಿನ ನಿಲುವುಗಳು ಸಂಪೂರ್ಣವಾಗಿ ಬದಲಾಗಲಿಲ್ಲ. ಪುರುಷ ಪ್ರಧಾನ ವ್ಯವಸ್ಥೆಯಿಂದ ಹೆಣ್ಣಿನ ಮೇಲೆ ಹೇರಲ್ಪಟ್ಟ ಮೌಲ್ಯ ವ್ಯವಸ್ಥೆಯ ಬಗೆಗೆ ವಚನಕಾರರಿಗೆ ಪೂರ್ಣ ಪ್ರಮಾಣದ ವಿರೋಧವಿರಲಿಲ್ಲ. ಹಾಗಾಗಿಯೇ ಬಸವಣ್ಣನ ವಚನಗಳಲ್ಲಿ ಹೆಣ್ಣನ್ನು ಕುರಿತಾದ ದ್ವಂದ್ವ ಧೋರಣೆಗಳು ವ್ಯಕ್ತವಾಗಿವೆ. ಸಾಮಾಜಿಕ ಸಮಾನತೆಯ ಮಾತನಾಡುತ್ತಿರುವಾಗಲೇ ಹೆಣ್ಣಿನ ಲೈಂಗಿಕತೆಯ ಬಗೆಗೆ, ಅವಳ ಚಾರಿತ್ರ್ಯದ ಬಗೆಗೆ, ಅವಳು ನಿರ್ವಹಿಸಬೇಕಾದ ಕೌಟುಂಬಿಕ ಮೌಲ್ಯಗಳ ಬಗೆಗೆ ಸಾಂಪ್ರದಾಯಿಕ ಮನಸ್ಥಿತಿಯ ಅಭಿವ್ಯಕ್ತಿಯೇ ಕಂಡುಬರುತ್ತದೆ.

**‘ಅವಳ ವಚನ ಬೆಲ್ಲದಂತೆ, ಹೃದಯದಲ್ಲಿಪ್ಪುದು ನಂಜು ಕಂಡಯ್ಯಾ,**
**ಕಂಗಳಲ್ಲೊಬ್ಬನ ಕರೆವಳು, ಮನದಲ್ಲೊಬ್ಬನ ನೆರೆವಳು**
**ಕೂಡಲಸಂಗಮದೇವ ಕೇಳಯ್ಯಾ,**
**ಮಾನಸಗಳ್ಳೆಯ ನಂಬದಿರಯ್ಯಾ’**

ಎನ್ನುವಲ್ಲಿ ಸಾಂಪ್ರದಾಯಿಕವಾಗಿ ಬಂದಿರುವ ಹೆಣ್ಣಿನ ಚಿತ್ರ ಮೂಡಿಬಂದಿರುವುದರೊಂದಿಗೆ ಕುಟುಂಬದಾಚೆಗಿನ ಹೆಣ್ಣಿನ ಲೈಂಗಿಕ ಬಯಕೆಗಳನ್ನು ಕೀಳಾಗಿ ಕಾಣಲಾಗುತ್ತಿದೆ. ವಚನಕಾರರಲ್ಲಿ ಚನ್ನಬಸವಣ್ಣ ಸೂಕ್ಷ್ಮ ಸಂವೇದನೆಯ ವಚನಕಾರ. ಹೆಣ್ಣಿನ ಜೈವಿಕತೆಯನ್ನು ಮುಕ್ತವಾಗಿ ಒಪ್ಪಿಕೊಳ್ಳುವ ಚನ್ನಬಸವಣ್ಣನಿಗೂ ಕೂಡ ಸೂಳೆಯ ಬಗೆಗೆ ತಿರಸ್ಕಾರದ ಭಾವವೇ ಇದೆ. ಅನಾಚಾರವನ್ನು ಕುರಿತು ಹೇಳುವಾಗ ಬೆಲೆವೆಣ್ಣು ಮತ್ತು ಸೂಳೆಯ ಉದಾಹರಣೆಯನ್ನು ತಂದಿರುವುದು ಸೂಳೆಯ ಬಗೆಗಿನ ಸಾಮಾಜಿಕ ನಂಬಿಕೆಯನ್ನೇ ಎತ್ತಿ ಹಿಡಿಯುತ್ತದೆ. ಮತ್ತೊಂದು ವಚನದಲ್ಲಿ ಸೂಳೆಯಾದವಳು ಭಕ್ತಿ ಮಾರ್ಗಕ್ಕೆ ಅನರ್ಹಳು ಎಂದು ತಿಳಿದು ಬರುತ್ತದೆ.

**ತನುಮುಟ್ಟಿ ಮನಮುಟ್ಟದೆ ದೂರವಾದರಯ್ಯಾ, ಬೆಲೆವೆಣ್ಣಿನಂತೆ!**
**ಸೂಳೆ ತನುಮುಟ್ಟಿ ಅಪ್ಪುವಳಲ್ಲದೆ ಮನಮುಟ್ಟಿ ಅಪ್ಪಳಾಗಿ:**
**ಆಚಾರವರಿಯದ ಅರೆ ಮರುಳುಗಳು**
**ಶಿವಸುಖವನೆತ್ತಬಲ್ಲರು. ಕೂಡಲ ಚನ್ನಸಂಗಮದೇವಾ?**

**(ಚನ್ನ ಬಸವಣ್ಣ ಪು.ಸಂ. 75)**

**ಅರಸಿನ ಭಕ್ತಿ ಅಹಂಕಾರದಿಂದ ಕೆಟ್ಟಿತ್ತು;**
**ಸೂಳೆಯ ಭಕ್ತಿ ಎಂಜಲು ತಿಂದಾಗಲೇ ಹೋಗಿತ್ತು;**

**(ಚನ್ನ ಬಸವಣ್ಣ ಪು.ಸಂ. 75)**

ಆದರೆ ಇದೇ ವಚನಕಾರರು ಕಾಯಕದ ಮಹತ್ವವನ್ನು ವಿವರಿಸುವ ಸಂದರ್ಭದಲ್ಲಿ ಮಾತ್ರ ಸೂಳೆ ಸಂಕವ್ವೆಯನ್ನು ಮುಕ್ತವಾಗಿ ಒಪ್ಪಿಕೊಳ್ಳುತ್ತಾರೆ. ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶ ಸೂಳೆಯಾಗಿ ದುಡಿಯುತ್ತಿರುವ ದುಡಿಮೆಯ ಬಗೆಗೆ ಗೌರವವಿದೆಯೇ ವಿನಃ ಹೆಣ್ಣಿನ ಆ ಸ್ಥಿತಿಯ ಬಗೆಗಲ್ಲ. ವಚನಕಾರರ ಪ್ರಕಾರ ಹೆಣ್ಣು ಪರ ಪುರುಷನನ್ನು ಬಯಸುವುದು ನಿಷಿದ್ಧ. ಹಾಗೆಯೇ ಗಂಡೂ ಕೂಡ

ಪರಸ್ತ್ರೀಯನ್ನು ಬಯಸುವುದನ್ನು ವಚನಕಾರರು ವಿರೋಧಿಸುತ್ತಾರೆ. ವಚನಕಾರರ ವಿಶೇಷತೆ ಅಡಗಿರುವುದು ಈ ಬಗೆಯ ಅಂಶಗಳಲ್ಲಿ ಹೆಣ್ಣು ಹೇಗೆ ಪರ ಪುರುಷನನ್ನು ಬಯಸುವುದು ಅಧರ್ಮವೋ ಗಂಡೂ ಕೂಡ ಪರಸ್ತ್ರೀಯನ್ನು ಬಯಸುವುದು ನಿಷಿದ್ಧವೇ. ಅಂದರೆ ಇವರು ಸಾಮಾಜಿಕ ಮೌಲ್ಯಗಳು ಗಂಡು ಹೆಣ್ಣು ಇಬ್ಬರಿಗೂ ಸಮಾನ ಎನ್ನುತ್ತಾರೆ. ಈ ಹಿನ್ನೆಲೆಯಲ್ಲಿ ಹೆಣ್ಣಿಗಿದ್ದ ಅಸಮಾನತೆಯನ್ನು ಹೋಗಲಾಡಿಸಲು ವಚನಕಾರರು ನಿರಂತರವಾಗಿ ಪ್ರಯತ್ನ ಪಟ್ಟಿದ್ದಾರೆ. ಪರವಧುವನ್ನು ಮಹಾದೇವಿಯೆಂಬೆ ಎನ್ನುವಲ್ಲಿ ಹೆಣ್ಣನ್ನು ಕೇವಲ ಲೈಂಗಿಕ ನೆಲೆಯಲ್ಲಿ ಮಾತ್ರ ನೋಡುವ ಸಾಮಾಜಿಕ ನಡೆಯ ಬಗೆಗೆ ವಚನಕಾರರು ತೀವ್ರ ವಿರೋಧ ವ್ಯಕ್ತಪಡಿಸುತ್ತಾರೆ.

ಹನ್ನೆರಡನೆ ಶತಮಾನದ ಪ್ರಮುಖ ವಚನಕಾರ ಹಾಗೂ ವಚನ ಚಳುವಳಿಯ ವಿಮರ್ಶಕನೂ ಆಗಿದ್ದ ಅಲ್ಲಮ ಪ್ರಭು ಸಮಾಜ ಹೆಣ್ಣನ್ನು ಗ್ರಹಿಸುತ್ತಿರುವ ಬಗೆಯನ್ನು ತನ್ನ ವಚನಗಳ ಮೂಲಕ ನಿರಾಕರಿಸುವ ಬಗೆ ವಿಶಿಷ್ಟವಾದದ್ದು. ಹೊನ್ನು, ಹೆಣ್ಣು, ಮಣ್ಣು ಈ ಮೂರನ್ನೂ ಮಾಯೆ ಎನ್ನುವ ಸಮಾಜದೆದುರು ಇವು ಮಾಯೆಯಲ್ಲ, ಮನಸ್ಸಿನ ಆಸೆಯೆ ಮಾಯೆ ಎಂದು ಸ್ಪಷ್ಟವಾಗಿ ಹೇಳುತ್ತಾನೆ. ಅಲ್ಲದೆ ಮನಸ್ಸಿನ ಬಯಕೆಗಳಿಗೂ ಹೆಣ್ಣಿನ ಅಸ್ತಿತ್ವಕ್ಕೂ ಸಂಬಂಧವಿಲ್ಲ ಎಂದು ಪುರುಷ ಪ್ರಧಾನ ವ್ಯವಸ್ಥೆ ಹಿಂದಿನಿಂದಲೂ ತನ್ನ ಮನಸ್ಸಿನ ಬಯಕೆಗಳನ್ನು ಹಿಡಿತದಲ್ಲಿರಿಸಿಕೊಳ್ಳುವ ಬದಲು ಹೆಣ್ಣನ್ನು ಮಾಯೆ ಎಂದು ಅವಳನ್ನು ನೇತ್ಯಾತ್ಮಕ ರೀತಿಯಲ್ಲಿಯೇ ಚಿತ್ರಿಸುತ್ತಾ ಬಂದಿರುವ ಬಗೆಯನ್ನು ಗುರುತಿಸಿ ಅದನ್ನು ತೊಡೆದು ಹಾಕುವ ಪ್ರಯತ್ನ ಮಾಡುತ್ತಾನೆ. ಮತ್ತೊಂದು ವಚನದಲ್ಲಿ 'ಆಸೆಗೆ ಸತ್ತುದು ಕೋಟಿ, ಆಮಿಷಕ್ಕೆ ಸತ್ತುದು ಕೋಟಿ, ಹೆಣ್ಣು, ಮಣ್ಣು, ಹೊನ್ನಿಗೆ ಸತ್ತುದು ಕೋಟಿ' ಎಂದು ಜನರ ಬಯಕೆಗಳ ಸ್ವರೂಪವನ್ನು ಸ್ಪಷ್ಟವಾಗಿ ಗುರುತಿಸುತ್ತಾ ಹೆಣ್ಣನ್ನು ಸಂಪತ್ತಿನ ಭಾಗವಾಗಿ ನೋಡುತ್ತಿರುವ ಪುರುಷ ಪ್ರಧಾನ ವ್ಯವಸ್ಥೆಯ ಕಡೆಗೆ ಗಮನ ಸೆಳೆದು ತನ್ನ ವಚನಗಳ ಮೂಲಕ ಮನುಷ್ಯ ಮೋಹ ಪಾಶದಿಂದ ಬಿಡುಗಡೆ ಹೊಂದಬೇಕಾಗಿರುವ ಬಗೆಯನ್ನು ಗುರುತಿಸುತ್ತಾನೆ.

ಸಿದ್ದರಾಮ ಹೆಣ್ಣನ್ನು ಸಾಕ್ಷಾತ್ ಕಪಿಲಸಿದ್ಧ ಮಲ್ಲಿಕಾರ್ಜುನ ಎನ್ನುವ ಮೂಲಕ ಹೆಣ್ಣಿನ ಅಗೋಚರ ಶಕ್ತಿಯನ್ನು ಅನಾವರಣ ಗೊಳಿಸುತ್ತಾನೆ. ಜೊತೆಗೆ ಸಾಂಪ್ರದಾಯಿಕವಾಗಿ ಹೆಣ್ಣಿನ ಬಗೆಗಿನ ದೈವೀ ಶಕ್ತಿಯನ್ನು ಕುರಿತು ಮಾತನಾಡುತ್ತಾನೆ. ಇದು ಒಂದು ಬಗೆಯಲ್ಲಿ ಹೆಣ್ಣಿನ ಶಕ್ತಿ ಮತ್ತು ಮಿತಿಗಳೆರಡನ್ನೂ ಕೂಡ ಒಟ್ಟಿಗೆ ಹಿಡಿದಿಡುತ್ತದೆ.

**ತಾ ಮಾಡಿದ ಹೆಣ್ಣು ತನ್ನ ತಲೆಯನೇರಿತ್ತು**
**ತಾ ಮಾಡಿದ ಹೆಣ್ಣು ತನ್ನ ತೊಡೆಯನೇರಿತ್ತು**
**ತಾ ಮಾಡಿದ ಹೆಣ್ಣು ಬ್ರಹ್ಮನ ನಾಲಗೆಯನೇರಿತ್ತು**
**ತಾ ಮಾಡಿದ ಹೆಣ್ಣು ನಾರಾಯಣನ ಎದೆಯನೇರಿತ್ತು**

**ಅದು ಕಾರಣ**
**ಹೆಣ್ಣು ಹೆಣ್ಣಲ್ಲ, ಹೆಣ್ಣು ರಾಕ್ಷಸಿಯಲ್ಲ,**
**ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧ ಮಲ್ಲಿಕಾರ್ಜುನ**

**– ಸಿದ್ದರಾಮ**

ಇಲ್ಲಿ 'ತಾ ಮಾಡಿದ ಹೆಣ್ಣು' ಎನ್ನುವ ಪದದ ಬಳಕೆ ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣಕರ್ತರಾದವರನ್ನೂ ಮೀರಿಸಿದ ಶಕ್ತಿ ಹೆಣ್ಣಿನದು ಎನ್ನುವ ಹೆಮ್ಮೆಯಿಂದ ಕೂಡಿದೆ. ಹಾಗಾಗಿ ಹೆಣ್ಣನ್ನು ಸಾಕ್ಷಾತ್ ಕಪಿಲಸಿದ್ಧ ಮಲ್ಲಿಕಾರ್ಜುನ ಎನ್ನುವಲ್ಲಿ ಅವಳ ದೈವೀ ವ್ಯಕ್ತಿತ್ವವನ್ನು ಸಾಮಾಜಿಕ ನೆಲೆಯಲ್ಲಿ ಗೌರವಿಸುವ ವಿಧಾನ ಕಂಡುಬರುತ್ತದೆ. ಹೆಣ್ಣಿಗಿದ್ದ ಸಾಮಾಜಿಕ ಅಸಮಾನತೆಯ ನೆಲೆಗಳನ್ನು ತೊಡೆದುಹಾಕುವ ನಿಟ್ಟಿನಲ್ಲಿ ವಚನಕಾರರು ಕೆಲಸ ಮಾಡಿದ್ದಾರೆ. ಆದರೆ ಅವಳಿಗೆ ಬೇಕಿರುವ ಸಮಾನತೆಯ ಆಶಯಗಳು ಯಾವುವು ಎಂಬುದನ್ನು ವಚನಕಾರರು ಸ್ಪಷ್ಟವಾಗಿ ಗುರುತಿಸದೇ ಹೋಗಿದ್ದಾರೆ. ಹಾಗಾಗಿಯೇ ಹೆಣ್ಣಿನ ಬಗೆಗೆ ಗೌರವವನ್ನು ಅಭಿವ್ಯಕ್ತಪಡಿಸುವ ಸಂದರ್ಭದಲ್ಲಿ ಸಾಂಪ್ರದಾಯಿಕ ಮೌಲ್ಯವ್ಯವಸ್ಥೆಯ ಕಟ್ಟುಪಾಡುಗಳಿಗೆ ಮತ್ತೆ ಮತ್ತೆ ಸಿಕ್ಕಿಹಾಕಿಕೊಳ್ಳುತ್ತಾರೆ. ಇದರ ನಡುವೆಯೂ ಸಾಮಾಜಿಕ ಮೌಲ್ಯವ್ಯವಸ್ಥೆಯಲ್ಲಿ ಅಡಕವಾಗಿರುವ ಹೆಣ್ಣು ಗಂಡಿನ ಅಸಮಾನತೆಯ ನೆಲೆಗಳನ್ನು ಗುರುತಿಸುವಲ್ಲಿ ವಚನಕಾರರು ಯಶಸ್ವಿಯಾಗಿದ್ದಾರೆ.

ವಚನಕಾರರು ಸತಿ ಪತಿ ಭಾವವನ್ನು ಕುರಿತಂತೆ ಪ್ರಧಾನವಾಗಿ ಚರ್ಚಿಸಿದ್ದಾರೆ. ಸತಿಪತಿಗಳೊಂದಾದದ ಭಕ್ತಿ ಹಿತವಪ್ಪುದು ಶಿವಂಗೆ ಎಂದು ಭಕ್ತಿಯ ಆಚರಣೆಯಲ್ಲಿ ಗಂಡು ಹೆಣ್ಣು ಇಬ್ಬರೂ ಸಮಾನವಾಗಿ ಪಾಲ್ಗೊಳ್ಳುವಿಕೆಯನ್ನು ಕುರಿತು ಮಾತನಾಡಿದರೆ ಶರಣಸತಿ – ಲಿಂಗಪತಿ ಭಾವದ ಅಭಿವ್ಯಕ್ತಿ ಮತ್ತೆ ಗಂಡಿನ ಪ್ರಧಾನತೆಯನ್ನೇ ಎತ್ತಿ ಹಿಡಿಯುತ್ತದೆ. ಈ ನಿಲುವನ್ನು ಕುರಿತು ಕೂಡ ವಚನಕಾರರ ಅಭಿವ್ಯಕ್ತಿ ಭಿನ್ನವಾಗಿದೆ. ಡಕ್ಕೆಯ ಬೊಮ್ಮಣ್ಣ ಸಂಸಾರದಲ್ಲಿ ಗಂಡು ಹೆಣ್ಣಿನ ಸ್ಥಾನಮಾನಗಳನ್ನು ಕುರಿತ ಸಾಮಾಜಿಕ ನಂಬಿಕೆಗಳನ್ನು ದಿಟ್ಟ ತನದಿಂದ ಪ್ರಶ್ನಿಸುವುದಲ್ಲದೆ ದೇಹದಲ್ಲಿ ಒಂದು ಕಣ್ಣಿಗೆ ಪೆಟ್ಟಾದರೂ ಕೂಡ ಊನವಾಗುವುದು ದೇಹವೇ ಎಂಬ ಉಪಮೆಯ ಮೂಲಕ ಅರಿವನ್ನು ಬಿತ್ತಿದ್ದಾನೆ.

**ಸತಿಯ ಗುಣವ ಪತಿ ನೋಡಬೇಕಲ್ಲದೆ,**
**ಪತಿಯ ಗುಣವ ಸತಿ ನೋಡಬಹುದೆ ಎಂಬರು.**
**ಸತಿಯಿಂದ ಬಂದ ಸೋಂಕು ಪತಿಗೆ ಕೇಡಲ್ಲವೆ?**
**ಪತಿಯಿಂದ ಬಂದ ಸೋಂಕು ಸತಿಯ ಕೇಡಲ್ಲವೆ?**
**ಒಂದಂಗದ ಕಣ್ಣು ಉಭಯದಲ್ಲಿ ಒಂದು ಹಿಂಗಲಿಕೆ**
**ಭಂಗವಾರಿಗೂ ಎಂಬುದು ತಿಳಿದಲ್ಲಿಯೆ–**
**ಕಾಲಾಂತಕ ಭೀಮೇಶ್ವರ ಲಿಂಗಕ್ಕೆ ಸಲೆ ಸಂದಿತ್ತು.**

**(ಡಕ್ಕೆಯ ಬೊಮ್ಮಣ್ಣ)**

ಎಂದು ಪತಿಯ ಗುಣವ ಸತಿ ನೋಡಬಹುದೆ? ಎಂಬ ಸಾಂಪ್ರದಾಯಿಕ ನಿಲುವನ್ನು ಪ್ರಶ್ನಿಸುವುದಲ್ಲದೆ ಅದಕ್ಕೆ ಉತ್ತರವನ್ನು ಮುಂದಿನ ಸಾಲುಗಳಲ್ಲಿ ನೀಡಿದ್ದಾನೆ. ಜೊತೆಗೆ ಸತಿಯ ಕೇಡು ಪತಿಯ ಮೇಲೂ, ಪತಿಯ ಕೇಡು ಸತಿಯ ಮೇಲೂ ಪರಿಣಾಮ ಬೀರುವುದನ್ನು ಬೊಮ್ಮಣ್ಣ ಎತ್ತಿಹಿಡಿದಿದ್ದಾನೆ. ಅಂದರೆ ಇಲ್ಲಿ ಪತಿ ಮೇಲು, ಸತಿ ಕೀಳು ಎನ್ನುವ ನಂಬಿಕೆಯೇ ಹುಸಿಯಾದದ್ದು ಎಂಬುದನ್ನು ತಿಳಿಸುತ್ತಲೇ ಇಬ್ಬರೂ ಕೂಡ ಮುಖ್ಯ, ಇಬ್ಬರಲ್ಲಿ ಒಬ್ಬರು ಶೋಷಣೆಗೆ ಒಳಗಾದರೂ ಸಮಾಜದ ಅಂಗ ಭಂಗವಾಗುತ್ತದೆ ಎಂಬ ಎಚ್ಚರಿಕೆಯನ್ನೂ ನೀಡಿದ್ದಾನೆ. ಮತ್ತೊಬ್ಬ ಪ್ರಮುಖ ವಚನಕಾರ ಅಂಬಿಗರ ಚೌಡಯ್ಯ ವಚನಕಾರರ ಪ್ರಮುಖ ಚಿಂತನೆಯಾದ ಶರಣಸತಿ, ಲಿಂಗಪತಿ ಎನ್ನುವ ಪರಿಕಲ್ಪನೆಯನ್ನೇ ವಿಮರ್ಶೆಗೆ ಒಡ್ಡುತ್ತಾ

**ಶರಣಸತಿ ಲಿಂಗಪತಿ ಎಂಬರು**
**ಶರಣ ಹೆಣ್ಣಾದ ಪರಿಯಿನ್ನೆಂತು?**
**ಲಿಂಗ ಗಂಡಾದ ಪರಿಯಿನ್ನೆಂತು?**
**ನೀರು ನೀರ ಕೂಡಿ ಬೆರೆದಲ್ಲಿ ಭೇದಿಸಿ ಬೇರೆ ಮಾಡಬಹುದೆ ?**
**ಗಂಡು ಹೆಣ್ಣು ಯೋಗವಾದಲ್ಲಿ ಆತುರ ಹಿಂಗೆ ಘಟ ಬೇರಾಯಿತ್ತು.**
**ಶರಣಸತಿ ಲಿಂಗಪತಿ ಎಂಬ ಮಾತು ಮೊದಲಿಗೆ ಮೋಸ-**
**ಲಾಭಕ್ಕಧೀನವುಂಟೆ? ಎಂದನಂಬಿಗ ಚೌಡಯ್ಯ**

**(ಅಂಬಿಗರ ಚೌಡಯ್ಯ ಪು.ಸಂ.87)**

ಎನ್ನುತ್ತಾನೆ. ಸತಿ ಪತಿ ಎನ್ನುವ ಗ್ರಹಿಕೆಯ ಮಿತಿಯನ್ನು ಕುರಿತು ಮಾತನಾಡುತ್ತಾ, ಗಂಡು ಹೆಣ್ಣನ್ನು ಜೈವಿಕತೆಯ ಕಾರಣದಿಂದ ಬೇರೆ ಬೇರೆಯಾಗಿ ನೋಡುವ ಕ್ರಮವೇ ದೋಷಪೂರ್ಣವಾದದ್ದು. ಶರಣ ಸತಿ - ಲಿಂಗ ಪತಿ ಎಂಬ ಮಾತೇ ಮೋಸ ಎಂದು ದಿಟ್ಟತನದಿಂದ ಇಡೀ ಚಿಂತನೆಯನ್ನೇ ಒಡೆದು ಹಾಕುತ್ತಾನೆ. ಜೈವಿಕತೆಯ ಕಾರಣದಿಂದಾಗಿ ಗಂಡು, ಹೆಣ್ಣನ್ನು ಬೇರೆ ಬೇರೆಯಾಗಿ ನೋಡುವುದನ್ನೂ, ಸತಿ ಪತಿ ಭಾವದಲ್ಲಿ ಅಡಕವಾಗಿರುವ ಶ್ರೇಣೀಕರಣದ ನೆಲೆಗಳನ್ನು ವಿರೋಧಿಸುತ್ತಾ, ನೀರು ನೀರ ಕೂಡಿ ಬೆರೆದಲ್ಲಿ ಭೇದಿಸಿ ಬೇರೆ ಮಾಡಬಹುದೆ? ಎಂದು ಲಿಂಗ ಸಮಾನತೆಯ ಆಶಯಕ್ಕೆ ಹೊಸ ಭಾಷ್ಯ ಬರೆಯುತ್ತಾನೆ ಅಂಬಿಗರ ಚೌಡಯ್ಯ. ಚನ್ನಬಸವಣ್ಣ ಇವರೆಲ್ಲರಿಗಿಂತ ಒಂದು ಹೆಜ್ಜೆ ಮುಂದೆ ಹೋಗಿ ಹೆಣ್ಣು ಮುಟ್ಟು ಅಥವಾ ಋತುಮತಿಯಾಗುವ ಕಾರಣವನ್ನು ನೀಡಿ ಅವಳನ್ನು ನಿಯಂತ್ರಿಸುವದರ ಬಗೆಯನ್ನು ಸಾರಾಸಗಟಾಗಿ ನಿರಾಕರಿಸುತ್ತಾನೆ.

**ಶ್ರೀಗುರುಕರುಣ ಕಟಾಕ್ಷದಲ್ಲಿ ಉತ್ಪತ್ಯವಾದ ಅಜಾತಂಗೆ**
**ಜಾತಿ ಸೂತಕ, ಜನನ ಸೂತಕ, ಪ್ರೇತ ಸೂತಕ**
**ರಜಸೂತಕವುಂಟೆಂಬವರಿಗೆ ಗುರುತಿಲ್ಲ,**
**ಲಿಂಗವಿಲ್ಲ, ಜಂಗಮವಿಲ್ಲ, ಪ್ರಸಾದವಿಲ್ಲವಯ್ಯ**
**ಕೂಡಲಚನ್ನಸಂಗಮಯ್ಯ**

ಎಂದು ಶ್ರೀ ಗುರುವಿನ ಕಟಾಕ್ಷದಲ್ಲಿ ಹುಟ್ಟಿದ ಎಲ್ಲರೂ ಸಮಾನರು, ಇದಕ್ಕೆ ತೊಡಕಾಗಿರುವ ಹಲವು ಕಾರಣಗಳಲ್ಲಿ ಸೂತಕದ ಚಿಂತನೆ ಕೂಡ ಒಂದು. ಚನ್ನಬಸವಣ್ಣ ಈ ಸೂತಕಗಳನ್ನು ಕುರಿತಂತೆ ಹೇಳುವಾಗ ಪುರುಷ ಪ್ರಧಾನ ವ್ಯವಸ್ಥೆ ಹೆಣ್ಣಿನ ಅಧೀನತೆಗೆ ಕಾರಣವೆಂದು ಗುರುತಿಸಿರುವ ರಜಸೂತಕವನ್ನು ಕುರಿತೂ ಕೂಡ ಹೇಳುತ್ತಾನೆ. ಜಾತಿ ಸೂತಕ, ಜನನ ಸೂತಕ, ಪ್ರೇತ ಸೂತಕಗಳು ಹೇಗೆ ಆಚರಿಸಬೇಕಾದ ಕ್ರಿಯೆಗಳಲ್ಲವೋ, ಅದರಂತೆಯೇ ರಜಸೂತಕವೆಂಬುದು ಇಲ್ಲ ಎಂಬುದನ್ನು ತಿಳಿಸುತ್ತಾನೆ. 12ನೇ ಶತಮಾನದ ಸಾಮಾಜಿಕ ಸಂದರ್ಭದಲ್ಲಿ ಇದೊಂದು ಕ್ರಾಂತಿಕಾರಕ ಆಲೋಚನೆ ಎಂಬುದರಲ್ಲಿ ಎರಡು ಮಾತಿಲ್ಲ. ಏಕೆಂದರೆ ಮುಟ್ಟಾಗುವಿಕೆಯ ಕಾರಣದಿಂದಾಗಿಯೇ ಹೆಣ್ಣು ಇಂದಿಗೂ ಹಲವು ರೀತಿಯ ಸವಾಲುಗಳನ್ನು ಎದುರಿಸುತ್ತಿರಬೇಕಾದರೆ ಅದನ್ನು ಸಾಮಾನ್ಯ ಜೈವಿಕ ಕ್ರಿಯೆ ಎಂದು ಭಾವಿಸುವ ವಚನಕಾರರಿಗೆ ಸೃಷ್ಟಿಕ್ರಿಯೆಯ ಬಗೆಗಿದ್ದ ಗೌರವ, ತಿಳುವಳಿಕೆ ಈ ವಚನದ ಮೂಲಕ ವ್ಯಕ್ತವಾಗುತ್ತದೆ. ಕೂಟಕ್ಕೆ ಸತಿ ಪತಿ ಎಂಬ ನಾಮವಲ್ಲದೆ ಅರಿವಿಗೆ ಬೇರೊಂದೊಡಲುಂಟೇ? ಎನ್ನುವ ಅರಿವು, ಮೊಲೆ ಮುಡಿ ಬಂದರೆ ಹೆಣ್ಣೆಂಬರು, ಗಡ್ಡ ಮೀಸೆ ಬಂದರೆ ಗಂಡೆಂಬರು, ನಡುವೆ ಸುಳಿವಾತ್ಮನು ಗಂಡೂ ಅಲ್ಲ, ಹೆಣ್ಣು ಅಲ್ಲ ಎನ್ನುವ ವಿವೇಕ ವಚನಕಾರರದ್ದು. ವಚನಕಾರರ ಈ ತಿಳುವಳಿಕೆ ಬಾಹ್ಯಾಡಂಬರದ, ಪಾಂಡಿತ್ಯ ಪ್ರದರ್ಶನವಾಗದೆ ತಮ್ಮ ಅರಿವಿನ, ಬದುಕಿನ ಕ್ರಮದ ಭಾಗವೇ ಆಗಿತ್ತು. ಹಾಗಾಗಿಯೇ ವಚನಕಾರರನ್ನು ಸ್ತ್ರೀ ಸಮಾನತೆಯ ನಿರ್ಮಾತೃಗಳು ಎಂದಿರುವುದು. ಇದೆಲ್ಲದರ ನಡುವೆಯೂ ವಚನಕಾರರು ಸಾಮಾಜಿಕ ಅಸಮಾನತೆಯ ನೆಲೆಗಳನ್ನು ಸ್ಪಷ್ಟವಾಗಿ ಗುರುತಿಸುತ್ತಾರೆ. ಮತ್ತು ಅದನ್ನು ಹೋಗಲಾಡಿಸುವ ಬಗೆಗಿನ ತುಡಿತವೂ ತೀವ್ರವಾಗಿದೆ. ಆದರೆ ಲಿಂಗ ಅಸಮಾನತೆಯನ್ನು ಹೋಗಲಾಡಿಸಲು ಅವರು ಕಂಡುಕೊಳ್ಳುವ ಮಾರ್ಗಗಳು ಮಾತ್ರ ಸಾಂಪ್ರದಾಯಿಕ ದೃಷ್ಟಿಕೋನಕ್ಕೆ ಅಂಟಿಕೊಂಡಿವೆ ಎನ್ನುವ ಕಟು ಸತ್ಯವನ್ನೂ ಕೂಡ ನಾವು ಒಪ್ಪಿಕೊಳ್ಳಲೇ ಬೇಕು.

ವಚನಕಾರರು ಹೆಣ್ಣನ್ನು ಗ್ರಹಿಸಿದ ಬಗೆಗಳಲ್ಲಿ ಹಲವಾರು ಮಿತಿಗಳಿದ್ದರೂ ಕೂಡ ಅವರು ಭಿನ್ನವಾಗುವುದು ಸಾಮಾಜಿಕ ಸ್ತರದಲ್ಲಿ ಹೆಣ್ಣಿನ ಪಾಲ್ಗೊಳ್ಳುವಿಕೆಗೆ ಮುಕ್ತ ಅವಕಾಶವನ್ನು ಕೊಟ್ಟ ಕಾರಣದಿಂದಾಗಿ. ಜೊತೆಗೆ ಆಧ್ಯಾತ್ಮಿಕವಾಗಿ ಪಾಲ್ಗೊಳ್ಳುವಿಕೆಯಲ್ಲಿ ಸ್ವಾತಂತ್ರ್ಯ ಸಮಾನತೆ, ಅಭಿವ್ಯಕ್ತಿ ಸ್ವಾತಂತ್ರ್ಯ, ಸಾಮಾಜಿಕ ಪಾಲ್ಗೊಳ್ಳುವಿಕೆಯಲ್ಲಿ ಹೆಣ್ಣಿನ ವ್ಯಕ್ತಿತ್ವದ ಘನತೆಗೆ ಅಧಿಕೃತತೆ ಮತ್ತು ಮಾನ್ಯತೆ ದೊರಕಿದ್ದು ವಚನ ಸಾಹಿತ್ಯದ ಕಾರಣದಿಂದಾಗಿ. ಇದರಲ್ಲಿ ಬಸವಣ್ಣನ ನೇತೃತ್ವದ ವಚನಚಳುವಳಿಯ ಪಾಲೆಷ್ಟಿದೆಯೋ ವೈಯಕ್ತಿಕವಾಗಿ ಅಭಿವ್ಯಕ್ತಿಯನ್ನು ಮಾಧ್ಯಮವಾಗಿಸಿಕೊಂಡ ವಚನಕಾರ್ತಿಯರ ದಿಟ್ಟತನದ ಪಾಲೂ ಕೂಡ ಅಷ್ಟೇ ಇದೆ. ವಚನಕಾರ್ತಿಯರು ಮತ್ತು ಕೀರ್ತನಕಾರ್ತಿಯರ ಬಹುದೊಡ್ಡ ಯಶಸ್ಸೆಂದರೆ ಅವರು ತಮಗೆ ಸಿಕ್ಕ ನೂಲೆಳೆಯ ಅವಕಾಶದಲ್ಲಿಯೇ ಸಾಮಾಜಿಕ ವಿಮರ್ಶೆ ಮತ್ತು ಸ್ತ್ರೀ ಪರವಾದ ಕಾಳಜಿಗಳನ್ನು ಅಭಿವ್ಯಕ್ತಪಡಿಸಿದ್ದಾರೆ. ಇವರ ರಚನೆಯ ಪ್ರಮಾಣ ಕಡಿಮೆಯಾದರೂ ಅಂತರಂಗದ ಪ್ರಾಮಾಣಿಕತೆ, ಅಭಿವ್ಯಕ್ತಿಯ ತೀವ್ರತೆ ಹೆಚ್ಚಾಗಿ

ಕಂಡುಬರುತ್ತದೆ.

ವಚನಕಾರರು ಮತ್ತು ವಚನಸಾಹಿತ್ಯ ದೇಶ, ಕಾಲಾತೀತವಾಗಿ ಮಾನ್ಯತೆಯನ್ನು ಪಡೆದಿರುವುದು, ಪಡೆಯುತ್ತಿರುವುದು ಇಂತಹ ಕಾರಣಗಳಿಂದಾಗಿಯೇ. ನಾಮದಲ್ಲಿ ಹೆಂಗೂಸೆಂಬ ಹೆಸರಾದಡೇನು? ಭಾವಿಸಲು ಗಂಡು ರೂಪು, ಬಸವ ನಿಮ್ಮ ದಯದಿಂದ! ಎನ್ನುವ ಅಕ್ಕ ಬಸವಣ್ಣನ ಲಿಂಗ ಸಮಾನತೆಯ ಆಶಯವನ್ನು ಎತ್ತಿಹಿಡಿದರೆ, ಅದೇ ವಚನಕಾರರ ಸಮಕಾಲೀನ ಅಂಬಿಗರ ಚೌಡಯ್ಯ ಬಸವಣ್ಣನ ಸಿದ್ಧಾಂತಗಳ ಮಿತಿಗಳನ್ನು ಕುರಿತು ಮಾತನಾಡುತ್ತಾನೆ. ಈ ಸ್ವಾತಂತ್ರ್ಯ ಬಹುಶಃ ಎಲ್ಲಾ ವಚನಕಾರರಿಗೂ ಇತ್ತು. ಆಯ್ದಕ್ಕಿ ಲಕ್ಕಮ್ಮ ಕೂಡ ತನ್ನ ಗಂಡ ಬಸವಣ್ಣನ ಮಹಾಮನೆಯಲ್ಲಿ ಚಿಂತನಾ ಗೋಷ್ಠಿಯಲ್ಲಿ ಕಾಯಕವನ್ನು ಮರೆತಿದ್ದಾಗ ಅವನನ್ನು ಎಚ್ಚರಿಸುವ ಪರಿ ಇಂತಹದ್ದೇ. ಅಂದರೆ ವಚನಕಾರರು ಹೇಳಿದ್ದೆಲ್ಲವೂ ಪ್ರಶ್ನಾತೀತವೇನೂ ಆಗಿರಲಿಲ್ಲ. ಬಸವಣ್ಣನಾದಿಯಾಗಿ ಎಲ್ಲಾ ವಚನಕಾರರಿಗೂ ತಮ್ಮ ಚಿಂತನೆ, ಆಲೋಚನೆ ಮತ್ತು ಅಭಿವ್ಯಕ್ತಿಯ ಮಿತಿಗಳನ್ನು ಚರ್ಚೆಗೆ ಒಳಪಡಿಸುವ, ಲೋಪದೋಷಗಳನ್ನು ಒಪ್ಪಿಕೊಳ್ಳುವ ಮನಸ್ಸಿತ್ತು. ಹಾಗಾಗಿಯೇ ವಚನಕಾರರು ತಾವೂ ಬೆಳೆಯುತ್ತಾ, ಇತರರನ್ನೂ ಬೆಳೆಸುತ್ತಾ ಬೆಳೆದರು. ಲಿಂಗಸಮಾನತೆಯನ್ನೂ ಒಳಗೊಂಡಂತೆ ಒಟ್ಟು ಸಾಮಾಜಿಕ ಸಮಾನತೆಯ ಆಶಯಗಳು ವಚನ ಸಾಹಿತ್ಯದ ಉದ್ದಕ್ಕೂ ನಿರಂತರವಾಗಿ ರೂಪುಗೊಳ್ಳುತ್ತಾ, ಬಹುತ್ವದ ಆಲೋಚನೆ, ಅಭಿವ್ಯಕ್ತಿಗಳೊಂದಿಗೆ ಮರುಹುಟ್ಟು ಪಡೆಯುತ್ತಾ ಅವು ಬದಲಾವಣೆಯ ಪ್ರಕ್ರಿಯೆಯ ಭಾಗವಾದವು.

**ಪರಾಮರ್ಶನ ಗ್ರಂಥಗಳು:**


1. ಕಲಬುರ್ಗಿ ಎಂ.ಎಂ. (ಸಂ.), (2016), ಬಸವಯುಗದ ವಚನ ಮಹಾಸಂಪುಟ –1, ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರ.
2. ಆಶಾದೇವಿ ಎಂ.ಎಸ್., (2011), ನಡುವೆ ಸುಳಿವಾತ್ಮ, ಶಿವಮೊಗ್ಗ: ಅಹರ್ನಿಶಿ ಪ್ರಕಾಶನ.
3. ರಹಮತ್ ತರೀಕೆರೆ (ಸಂ.), (2005), ಅಕ್ಕಮಹಾದೇವಿಯ ವಚನಗಳು ಸಾಂಸ್ಕೃತಿಕ ಮುಖಾಮುಖಿ, ಹಂಪಿ: ಪ್ರಸಾರಾಂಗ, ಕನ್ನಡ ವಿ.ವಿ.
4. ಸಬಿತಾ ಬನ್ನಾಡಿ, (2010), ಆಲಯವು ಬಯಲಾಗಿ, ಕುಂದಾಪುರ: ತಿಂಗಳುಬೆಳಕು ಪ್ರಕಾಶನ.